**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.**

**ಸಿಸಿ ನಂ.412/2019**

**ಫಿರ್ಯಾದಿಃ** ಸರಕಾರದ ಪರವಾಗಿಃ ಅಫಜಲಪೂರ ಪೊಲೀಸ ಠಾಣೆ.

**-ಃಃ ವಿರುದ್ಧ ಃಃ-**

**ಆರೋಪಿ/ತರುಃ** ರಮೇಶ ತಂದೆ ಬಾಬು ಹೊನಮಾನೆ,
ವಃ 29 ವರ್ಷ, ಉಃ ಟ್ರಾಕ್ಟರ ಚಾಲಕ,
ಸಾಃ ಅಗರಖೇಡ ಗ್ರಾಮ, ತಾಃ ಇಂಡಿ,
ಜಿಃ ವಿಜಯಪೂರ.

**ದೋಷಾರೋಪಣೆ**

ನಾನು ಶ್ರೀ ಅನಿಲ ಅಮಾತೆ., ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಅಫಜಲಪೂರ, ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಆರೋಪಕ್ಕೆ ಗುರಿಪಡಿಸುತ್ತೇನೆ.

1. ದಿನಾಂಕ 28.04.2019 ರಂದು ಬೆಳಿಗ್ಗೆ 09-05 ಗಂಟೆ ಸುಮಾರಿಗೆ ಅಫಜಲಪೂರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಕೂಡಿಗನೂರ ಗ್ರಾಮದ ಭೀಮಾ ನದಿಯ ಹತ್ತಿರ ಆರೋಪಿತನಾದ ನೀನು ನಿನ್ನ ವಶದಲ್ಲಿದ್ದ ಕೆಎ-28-ಟಿಡಿ-0371 ಅದರ ಚೆಸ್ಸಿ ನಂ.WSCM-40906082943ನೇದ್ದರ ಟ್ರಾಕ್ಟರನಲ್ಲಿ ಸರಕಾರದಿಂದ ಅಧಿಕೃತವಾಗಿ ಯಾವುದೇ ಪರವಾನಿಗೆ ಇಲ್ಲದೆ ಹಾಗೂ ರಾಜ್ಯ ಸರಕಾರಕ್ಕೆ ರಾಜ್ಯ ಧನ ಕಟ್ಟದೆ ಭೀಮಾ ನದಿಯಿಂದ ಅಕ್ರಮವಾಗಿ ಕಳ್ಳತನದಿಂದ ಮರಳು ಸಾಗಾಣೆ ಮಾಡುವ ಸಲುವಾಗಿ ಮರಳು ಟ್ರ್ಯಾಕ್ಟರನಲ್ಲಿ ತುಂಬುತ್ತಿದ್ದಾಗ, ಫಿರ್ಯಾದಿ ಚಾಸಾ-1 ಮತ್ತು ಚಾಸಾ-4 ರಿಂದ 6 ರವರು ಚಾಸಾ-2 ಮತ್ತು 3 ರವರ ಸಮಕ್ಷಮ ದಾಳಿ ಮಾಡಿ ಹಿಡಿಯಲು ಬಂದಾಗ, ಸದರಿ ಆರೋಪಿಯಾದ ನೀವು ಅವರನ್ನು ನೋಡಿ ನಿನ್ನ ಟ್ರ್ಯಾಕ್ಟರನಲ್ಲಿದ್ದ ಮರಳನ್ನು ನದಿಯಲ್ಲೆ ಡಂಪ ಎತ್ತಿ ಓಡಿ ಹೋಗಿದ ಕಾರಣ, ಆ ಮೂಲಕ ಆರೋಪಿತನಾದ ನೀನು ಭಾ.ದಂ.ಸಂ. 379, 511 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರಃ-1) ಮೇಲ್ಕಾಣಿಸಿದ ದೋಷಾರೋಪಣೆಯನ್ನು ಓದಿ ಹೇಳಿ ತಿಳಿಸಿದ್ದನ್ನು ಅರ್ಥಮಾಡಿಕೊಂಡಿದ್ದೀರಾ?

ಉಃ

ಪ್ರಃ-2)  ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತೀರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ

(ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಅವನು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ದಿನಾಂಕಃ 30.11.2024  ಪ್ರ.ದ.ನ್ಯಾ.ದಂ. ಅಫಜಲಪೂರ